**CW : 14**

PW : 10

**1**ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.864/2023

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀ ಧನಂಜಯ ಬಿ.ಸಿ. |
| ತಂದೆಯ ಹೆಸರು | : | ಚನ್ನೆ ಗೌಡ |
| ಪ್ರಾಯ | : | 34 ವರ್ಷ |
| ಉದ್ಯೋಗ | | ಪಿ.ಎಸ್‌ಐ , ಸಂಚಾರ ಪೊಲೀಸು ಠಾಣೆ , ಚಿಕ್ಕ ಮಗಳೂರು |
| ವಾಸಸ್ಥಳ | : | ಚಿಕ್ಕಮಗಳೂರು |

ದಿನಾಂಕ:**09-06-2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ನಾನು ಜೂನ್ 2023 ರಿಂದ ಅಕ್ಟೋಬರ್ 2023 ರ ವರೆಗೆ ಪುತ್ತೂರು ಗ್ರಾಮಾಂತರ ಪೊಲೀಸು ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 12-07-2023 ರಂದು ಚಾ.ಸಾ.14 ರವರಿಂದ ಪ್ರಕರಣದ ಕಡತವನ್ನು ಪಡೆದು ಪರಿಶೀಲಿಸಿರುತ್ತೇನೆ. ಅದೇ ದಿನ ಪ್ರಕರಣದಲ್ಲಿನ ಚಾ.ಸಾ.2 ಮತ್ತು 3 ರವರ ಗಾಯದ ಪ್ರಮಾಣಪತ್ರಗಳನ್ನು ಪಡೆದಿರುತ್ತೇನೆ. ಆರೋಪಿತನ ವಿರುದ್ಧ ತನಿಖೆ ಪೂರೈಸಿ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರ ವನ್ನು ನಿವೇದಿಸಿಕೊಂಡಿರುತ್ತೇನೆ.

ಸಾಕ್ಷಿಯು ಚಾ.ಸಾ.2 ಮತ್ತು 3 ರವರ ಗಾಯದ ಪ್ರಮಾಣಪತ್ರಗಳನ್ನು ಹಾಗೂ ಅವುಗಳಲ್ಲಿನ ತನ್ನ ಸಹಿಗಳನ್ನು ಗುರುತಿಸಿದ್ದು , ಗಾಯದ ಪ್ರಮಾಣಪತ್ರಗಳನ್ನು ಕ್ರಮವಾಗಿ ನಿ.ಪಿ.12 ಮತ್ತು ನಿ.ಪಿ.13 ಎಂದು ಗುರುತಿಸಿದ್ದು , ಅವುಗಳಲ್ಲಿನ ಸಾಕ್ಷಿಯ ಸಹಿಗಳನ್ನು ನಿ.ಪಿ.12(ಎ) ಮತ್ತು ನಿ.ಪಿ.13(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲು:ಆರೋಪಿತರ ಪರ ಶ್ರೀ ಬಿ.ಎನ್.ಪಿ. ವಕೀಲರಿಂದ:

ನನ್ನ ಹಿಂದಿನ ತನಿಖಾಧಿಕಾರಿ ಆರೋಪಿಗೆ 7 ದಿನಗಳ ಒಳಗೆ ವಾಹನದ ವಾಯುಮಾಲಿನ್ಯ ದೃಢೀಕರಣ ಪತ್ರವನ್ನು ನೀಡಬೇಕೆಂದು ನೋಟೀಸು ಕೊಟ್ಟಿದ್ದನ್ನು ನಾನು ಕಡತದಲ್ಲಿ ನೋಡಿಲ್ಲ. ನನ್ನ ತನಿಖಾ ಕಾಲದಲ್ಲಿ ನಾನು ಕೂಡಾ ಆರೋಪಿಗೆ ವಾಹನದ ವಾಯುಮಾಲಿನ್ಯ ದೃಢೀಕರಣ ಪತ್ರವನ್ನು ನೀಡಬೇಕೆಂದು ನೋಟೀಸು ಕೊಟ್ಟಿಲ್ಲ. ನಾವು ನೋಟೀಸು ಕೊಟ್ಟು ಅದಕ್ಕೆ ಸರಿಯಾದ ರೀತಿ ಉತ್ತರ

**CW : 14**

PW : 10

ಕೊಡದೆ ವಾಹನದ ವಾಯುಮಾಲಿನ್ಯ ದೃಢೀಕರಣ ಪತ್ರವನ್ನು ಕೊಡದೇ ಇದ್ದ ಪಕ್ಷದಲ್ಲಿ ಸಿಎಂವಿ ರೂಲ್ 115 ಸಹವಾಚಕ ಕಲಂ 190(2) ಐಎಂವಿ ಕಾಯ್ದೆ ಯಡಿಯಲ್ಲಿ ಆರೋಪಿ ವಿರುದ್ದ ಪ್ರಕರಣ ದಾಖಲು ಮಾಡಲಾಗುತ್ತದೆ ಎಂದರೆ ಸರಿ. ನಾನು ಸಮಪರ್ಕವಾದ ತನಿಖೆ ಮಾಡದೇ ಆರೋಪಿ ವಿರುದ್ದ ಸುಳ್ಳು ದೋಷಾರೋಪಣಾ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.